*ನರಸಿಂಹ ಎಂ. ಪೈ, ಹೊನ್ನಾವರ*
*ಪ್ರೀತಿ ಅಮರವೋ, ಭ್ರಮರವೋ?*



ಹಳ್ಳಿಗಳಲ್ಲಾದರೆ ಸ-ಮರ, ನಗರದಲ್ಲಾದರೆ ಅ-ಮರ!

*ಎಚ್.ಆರ್. ದೇಸಾಯಿ, ರಾಯಚೂರು*
*ಹಗಲು ರಾತ್ರಿ ನಮ್ಮನ್ನು ಮಲಗಲೂ ಬಿಡದೆ ದುಡಿಸಿಕೊಳ್ಳುವ ಹಣ ತಾನು ಯಾವಾಗ ಮಲಗುತ್ತದೆ?*
ಸ್ವಿಸ್ ಬ್ಯಾಂಕ್ ಸೇರಿದ ತಕ್ಷಣ!

*ಮಹಾವೀರ ಕಾಸರ, ಶಿವಮೊಗ್ಗ*
*ಮೊದಲ ಮುತ್ತಿಗೂ, ಕೊನೆಯ ಸಿಪ್‌ಗೂ ಏನು ವ್ಯತ್ಯಾಸ?*
ಮೊದಲ ಮುತ್ತಿನ ನಂತರ ವಶ, ಕೊನೆಯ ಸಿಪ್ (ಗಂಗಾಜಲ)ನ ನಂತರ ಶವ!

*ಎಂ.ಎಸ್. ಗುರುರಾಜಾಚಾರು, ಬಳ್ಳಾರಿ*
*ದೇಶದಲ್ಲಿ ಎಲ್ಲಾ ಹೆಣ್ಣುಮಕ್ಕಳು ಒಂದು ದಿನ ಮೌನವ್ರತ ಆಚರಿಸಿದರೆ?*
ಅಚ್ಚರಿ ತಡೆಯಲಾರದೆ ಇಡೀ ಗಂಡುಕುಲ ಒಂದು ವಾರ ಮೂರ್ಛೆ ಬೀಳುತ್ತದೆ!

*ಮನೋರಮಾ ಪ್ರಭು, ಕಾಸರಕೋಡ*
*ಅರವತ್ತಕ್ಕೆ ಅರಳು ಮರಳು ಎನ್ನುತ್ತಾರೆ, ಏಕೆ?*



‘ಅದು ಅರಳು ಮರಳು ಅಲ್ಲ; ಮರಳಿ ಅರಳುವ ವಯಸ್ಸು’ ಎಂದರು ವರಕವಿ ಬೇಂದ್ರೆ!

*ಕಂಡಕ್ಟರ್ ರಾಜು, ಗುಬ್ಬಿ*
*ನಾನು ಖುಷಿಗೂ, ದುಃಖಕ್ಕೂ ಗುಂಡು ಹಾಕುತ್ತೇನೆ, ನೀವು?*
ಖುಷಿಗೆ ✔ ಹಾಕುತ್ತೇನೆ, ದುಃಖಕ್ಕೆ X ಹಾಕುತ್ತೇನೆ.

*ಕೆ.ಎಸ್. ನಾರಾಯಣರೆಡ್ಡಿ, ಕೆ.ಜಿ.ಎಫ್.*
*ವೃತ್ತಿಗಳಲ್ಲಿ ಅತ್ಯಂತ ಶ್ರೇಷ್ಠ ವೃತ್ತಿ ಯಾವುದು, ಅತ್ಯಂತ ನೀಚ ವೃತ್ತಿ ಯಾವುದು?*
ನಂಬಿದವರಿಗೆ ಕೈ ನೀಡುವುದು ಶ್ರೇಷ್ಠ ವೃತ್ತಿ, ಕೈ ಕೊಡುವುದು ನೀಚ ವೃತ್ತಿ!

*ಶ್ವೇತಾಲಕ್ಷ್ಮಿ ಅಮ್ಮೈ, ಬೆಂಗಳೂರು*
*ಪತ್ನಿಯ ಸಂಬಳಕ್ಕೆ ಕೈಚಾಚುವ ಗಂಡನನ್ನು ಏನೆಂದು ಕರೆಯುತ್ತಾರೆ?*
ಏನೇನೋ ಕರೆಯುತ್ತಾರೆ, ಆದರೆ ಅವನ್ನು ಇಲ್ಲಿ ಪ್ರಿಂಟ್ ಮಾಡಿದರೆ ‘ಅಸಭ್ಯ’ ಎಂದು ಓದುಗರು ಬೈಯುತ್ತಾರೆ!

*ಶಿವರಾಜ ಕೆ. ವಿಭೂತಿ, ಹರಿಹರ*
*ಪ್ರೀತಿ- ಪ್ರೇಮಕ್ಕೆ ತಾಜ್‌ಮಹಲ್. ಆದರೆ ಕೋಪಕ್ಕೆ, ತಾಪಕ್ಕೆ ಏನು?*
ಕೋಪಕ್ಕೆ ಅರೆ ಮುರಿದ ಹಲ್ಲು, ತಾಪಕ್ಕೆ ಹವಾಮಹಲ್ಲು!

*ಬಿ.ಎಂ.ಪರಶಿವಮೂರ್ತಿ, ಬೆಂಗಳೂರು*
*ಮೋಡಗಳು ಢಿಕ್ಕಿ ಹೊಡೆದರೆ ಸಿಡಿಲು, ಗುಡುಗು, ಮಳೆ; ಹುಡುಗ ಹುಡುಗಿ ಢಿಕ್ಕಿ ಹೊಡೆದರೆ?*
ಒಪ್ಪಿದರೆ ಕೋಲ್ಮಿಂಚು, ತಪ್ಪಿದರೆ ಬೈಗುಳ, ಹೊಡೆತಗಳ ಸುರಿಮಳೆ!

*ಲೂಯಿಸ್ ಫರ್ನಾಂಡಿಸ್, ಶಿರಸಿ*
*ಸಾರಾಯಿ ಬಂದ್ ಮಾಡಿದ ಸರ್ಕಾರ ಬ್ರಾಂದಿ, ವಿಸ್ಕಿ ಬಂದ್ ಮಾಡಲು ಹೆದರುತ್ತಿದೆಯಲ್ಲಾ?*
ಬಹಳ risky, ಅವನ್ನು ಬಂದ್ ಮಾಡುವುದು ಭ್ರಾಂತಿಯೇ ಎಂದಿತಂತೆ ಅಬ್ಕಾರಿ ಖಾತೆ!

*ಹಾಡ್ಯ ಜಯಾನಂದ, ಮೈಸೂರು*
*ಹಳೆ ಕಟ್ಟಡ ಬೀಳಿಸುವವರಿಗೂ, ಹೊಸ ಸರ್ಕಾರ ಉರುಳಿಸುವವರಿಗೂ ಏನು ವ್ಯತ್ಯಾಸ?*
ಅವರದು ನಿರ್ಮಾಣಕ್ಕೆ ಬುನಾದಿ, ಇವರದು ನಿರ್ನಾಮದ ಹಾದಿ!

*ಎಸ್.ಜಿ. ಕರನಂದಿ, ವಿದ್ಯಾನಗರ*
*ಲಂಚ, ಮಂಚ, ಕುಂಚ ? ಈ ಮೂರರ ವ್ಯತ್ಯಾಸವೇನು?*
ಕುಂಚ ಕಲೆಗಳ ಮೂಲ, ಮಂಚ ಕೊಳೆಗಳ ಮೂಲ, ಲಂಚ ಕೊಳ್ಳೆಗೆ ಮೂಲ ಎಂದನಾ ಡಿಂಕಣ್ಣ!

*ಕುಬೇರಪ್ಪ ಎಂ. ವಿಭೂತಿ, ಕಾಳಿದಾಸನಗರ*
*ಕುರ್ಚಿಗೆ ಅಂಟಿಕೊಳ್ಳುವುದಕ್ಕೂ, ಪ್ರೀತಿಗೆ ಅಂಟಿಕೊಳ್ಳುವುದಕ್ಕೂ ವ್ಯತ್ಯಾಸವೇನು?*
ಮಾನ ಬಿಟ್ಟರೆ ಕುರ್ಚಿಗೆ ಅಂಟಿಕೊಳ್ಳಬಹುದು, ಮಾವ ಬಿಟ್ಟರೆ ಪ್ರೀತಿಗೆ ಅಂಟಿಕೊಳ್ಳಬಹುದು!

## ಬಹುಮಾನಿತ ಪ್ರಶ್ನೆ

*ನಂದನ್ ಕುಮಾರ್ ಪೆರ್ನಾಜೆ, ಪುತ್ತೂರು*
*ಪವಾಡಕ್ಕೂ, ಮಾಟ-ಮಂತ್ರಕ್ಕೂ ಇರುವ ವ್ಯತ್ಯಾಸವೇನು?*
ಅದೇ ಕೃತಿ, ಅದೇ ರೀತಿ; ಬಾಬಾ ಮಾಡಿದರೆ ಪವಾಡ, ಮಾಂತ್ರಿಕ ಮಾಡಿದರೆ ಮಾಟ-ಮಂತ್ರ!

*ಆರ್. ಮಧುಸೂದನ್, ಹಾಸನ*
*ಹರೆಯದಲ್ಲಿ ಮುನಿದು ದೂರವಾಗಿದ್ದ ಹುಡುಗಿ ವೃದ್ಧಾಪ್ಯದಲ್ಲಿ ಎದುರಾಗಿದ್ದಾಳೆ. ಏನು ಮಾಡಲಿ?*
ಕೂಡಲೆ ಸೀರಿಯಲ್ ನಿರ್ದೇಶಕರನ್ನು ಕರೆಯಿರಿ, ಇಬ್ಬರ ಜೀವನದ ಕಥೆ ಮೆಗಾ ಸೀರಿಯಲ್ ಆಗಿ, ನಿಮ್ಮ ಕಥೆ ಮುಗಿಯುವವರೆಗೆ, ನೀವೇ ನಾಯಕ, ನಾಯಕಿ ಆಗಬಹುದು!

*ಪಿ.ಎಸ್. ಶ್ರೀವತ್ಸ, ಬೆಂಗಳೂರು*
*ತಂದೆತಾಯಿಗಳೇ ವೃದ್ಧಾಶ್ರಮ ಸೇರುತ್ತೇವೆ ಎಂದರೂ ಮಕ್ಕಳು ಬೇಡವೆನ್ನಲು ಕಾರಣ...?*
ಆಸ್ತಿಯನ್ನು ವೃದ್ಧಾಶ್ರಮಕ್ಕೆ ಬರೆದುಬಿಡುವರೆಂಬ ಭಯ!

*ಶಿರಾಲಿ ದೀಪಕ್ ಆರ್. ಶೇಟ್, ಬೆಂಗಳೂರು*
*ರಾಜಕಾರಣಿಗಳ ದೌರ್ಬಲ್ಯಕ್ಕೂ, ಕ್ರಿಕೆಟ್ ಆಟಗಾರರ ದೌರ್ಬಲ್ಯಕ್ಕೂ ಏನು ವ್ಯತ್ಯಾಸ ರಾಂ?*
ಇವರ ದೌರ್ಬಲ್ಯ 20- twenty, ಅವರ ದೌರ್ಬಲ್ಯ plenty- plenty.

*ಆರ್. ವಿಜಯಲಕ್ಷ್ಮಿ, ಕೊಳ್ಳೇಗಾಲ*
*ವಿಧಾನಸೌಧದಲ್ಲಿ ಬಾವಿಗಿಳಿದು ಪ್ರತಿಭಟನೆ...?*
ನೀರಿಲ್ಲದ ಬಾವಿ; ಪಾಪಿ ಬಾವಿಗಿಳಿದ್ರೆ ಕಣ್ಣಲ್ ಮಾತ್ರ ನೀರು!

*ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ*
*ಸುಖ-ದುಃಖವನ್ನು ಸರಿಸಮಾನವಾಗಿ ಹಂಚಿಕೊಳ್ಳುವ ವ್ಯಕ್ತಿಗಳು ಯಾರಿದ್ದಾರೆ?*



ಹಾರ ಮಾರುವವರು? ಮದುವೆಗೂ, ಮಸಣಕೂ ಅವರದು ಒಂದೇ ದರ, ಆದರ!

■ ರಾಮ್